ಸೇವಾ ಮತ್ತು ಸಬಲೀಕರಣದೆಡೆಗೆ ನಮ್ಮ ಹೆಜ್ಜೆ...

# ಪರಸ್ಪರ

ಬಹು ವಿಭಾಗಗಳು

ನಮ್ಮಿಂದ,
ನಮಗಾಗಿ

**ಪರಸ್ಪರ** ಬಹು ವಿಭಾಗಗಳು — ನಮ್ಮಿಂದ, ನಮಗಾಗಿ

# ಪರಸ್ಪರ ನನಗೇಕೆ ಬೇಕು ಎಂದು ನಿಮ್ಮಲ್ಲೂ ಪ್ರಶ್ನೆ ಮೂಡಿರಬೇಕಲ್ಲ ಬನ್ನಿ ಪರಸ್ಪರ ಸಹಕಾರದಿಂದ ಸಫಲತೆಯತ್ತ ಸಾಗುವ ಹಾದಿ ನಮಗೆ ಯಾವ ರೀತಿ ಸಹಾಯ ಆಗಬಹುದು ಎಂದು ನೋಡೋಣ

## ಪರಸ್ಪರದ ಹಾದಿಯಲ್ಲಿ ನಾವು ಸಹಯಾತ್ರಿಗಳು, ಒಂದೇ ಕುಟುಂಬದ ಸದಸ್ಯರು!

ಜೀವನದ ಗಮನವು ಹೊಸ ಕನಸುಗಳಿಂದ, ಸನ್ನಿಹೆಯಿಂದ ಹಾಗೂ ಹಂಬಲಗಳಿಂದ ತುಂಬಿರುತ್ತದೆ. ಆದರೆ ಈ ಹಾದಿಯಲ್ಲಿ ಒಂಟಿಯಾಗಿ ನಡೆದು ತಲುಪುವುದಕ್ಕಿಂತ, ಕೈ ಕೈ ಜೋಡಿಸಿ ಪರಸ್ಪರ ಬೆಂಬಲಿಸಿಕೊಳ್ಳುವುದೇ ನಿಜವಾದ ಯಶಸ್ಸಿನ ಗುರಿ ತಲುಪುವ ಹಾದಿ. ಪರಸ್ಪರದ ನಂಟು ಇದು ಕೇವಲ ಒಬ್ಬರ ಉನ್ನತಿಗೆಲ್ಲ; ಇದು ಎಲ್ಲರ ಸಮೂಹ ಪ್ರಗತಿಯ ಮಹಾಸಂಗಮ!

ಈ ಪರಸ್ಪರವೇ ನಿನ್ನ ಕನಸುಗಳನ್ನು ಬೆನ್ನುಹತ್ತುವ ಬಲ.

ಇಲ್ಲಿ ಪ್ರತಿಯೊಬ್ಬ ಸದಸ್ಯನೂ ಇನ್ನೊಬ್ಬನ ಗೆಳೆಯ, ಸಹಾಯಕ, ಮಾರ್ಗದರ್ಶಕ. ಹಗಲು-ರಾತ್ರಿ ಕಷ್ಟದಲ್ಲಿಯೂ ಕೈ ಹಿಡಿಯುವ ಸ್ನೇಹ ಹಸ್ತಗಳು ಇಲ್ಲಿವೆ. ನಿನ್ನ ಅಸಾಧ್ಯವೆನಿಸಬಹುದಾದ ಗುರಿಗಳನ್ನು ಸಾಧಿಸಲು ಪರಸ್ಪರವೇ ನಿನ್ನ ಶ್ರದ್ಧಾಸ್ಪದ ವೇದಿಕೆ.

ಏನು ಬೇಕಾದರೂ ಸಾಧ್ಯ ಎಂಬ ನಂಬಿಕೆಗೆ ಬಲ.

ಸ್ವಾವಲಂಬನೆಗೆ ನಾಂದಿ ಹಾಡುವ ತಂತ್ರಜ್ಞಾನ ವಿಭಾಗವೂ ಇಲ್ಲಿದೆ. ನಿನ್ನ ಪ್ರತಿಭೆಗೆ ಹೊಸ ಅರ್ಥ ನೀಡುವ ದೇಸಿ ಸಂತೆಯ ಬಾಗಿಲು ಸದಾ ತೆರೆದಿದೆ. ನಿನ್ನ ಮಗು ಹೆಚ್ಚುವರಿ ವಿದ್ಯೆ ಕಲಿಯಲು ಅರಿವಿನ ಗುರುಕುಲವೂ ಇಲ್ಲಿ ಹೊಳೆಹರಿಯುತ್ತಿದೆ. ಕೃಷಿಕನ ಕನಸು ಹೊತ್ತ ಹೊಲಕ್ಕೆ ಆಧುನಿಕ ಜ್ಞಾನವನ್ನೂ ನೀಡುವ ಕೃಷಿ ವಿಭಾಗವೂ ಇಲ್ಲಿದೆ. ಪ್ರತಿಯೊಬ್ಬನಿಗೂ ಅವರ ಅವರ ಕನಸು ಸಾಕಾರಗೊಳ್ಳಲು ಕೈಹಿಡಿಯುವದು ಪರಸ್ಪರದ ಧ್ಯೇಯ!

ಸಾಧನೆಗೆ ಉತ್ತೇಜನ ನಿನ್ನ ಪ್ರತಿ ಹೆಜ್ಜೆಗೆ ಬೆಂಬಲ!

ನಿನ್ನ ಸಾಧನೆ ಬೆಲೆ ಕಣ್ಗೊಂಡು ಪ್ರೋತ್ಸಾಹಿಸುವ ವಿವಿಧ ಪ್ರಶಸ್ತಿಗಳು ವರ್ಷದ ಕನ್ನಡಿಗ, ಯಶಸ್ವಿ ಉದ್ಯಮಿ, ಪರಿಶ್ರಮ ಸಾಧಕ ನೀನು ನಿನ್ನ ಪ್ರಯತ್ನಕ್ಕೆ ತಕ್ಕ ಪ್ರಾಮಾಣಿಕ ಗೌರವ ಪಡೆಯುವ ವೇದಿಕೆ!

ಸಮಾನುಭವದ ಸೌಹಾರ್ದತೆ

ಮಾನವೀಯತೆಯ ಮಿತಿಯೇ ಇಲ್ಲದ ಪರಸ್ಪರವೇ ನಿನ್ನ ಜೊತೆಯಲ್ಲಿದೆ, ಹೇಗಾದರೂ ನಿನ್ನನ್ನು ಬೆಂಬಲಿಸಲು, ನಿನ್ನ ಕಷ್ಟ ಸುಖಗಳನ್ನು ಹಂಚಿಕೊಳ್ಳಲು. ಸಂಕಷ್ಟದ ವೇಳೆಯಲ್ಲಿ ತುರ್ತು ನಿಧಿಯ ನೆರವು ನಿನ್ನ ಬೆಂಬಲವಿದೆ. ಪರಸ್ಪರದ ಇಚ್ಛಾಶಕ್ತಿ ನಿನ್ನ ಆರ್ಭಟವನ್ನು ಶಮನಗೊಳಿಸುತ್ತದೆ, ನಿನ್ನ ಔತ್ಸಾಹಿಕ ಪ್ರಯತ್ನಗಳಿಗೆ ಹೊಸ ಜೀವ ತುಂಬುತ್ತದೆ.

ಬನ್ನಿ, ಪರಸ್ಪರದ ಅಂಗವಾಗಿ ನಾವು ಎಲ್ಲರೂ ಒಂದೇ ಕುಟುಂಬ.

ನಾವೆಲ್ಲ ಒಂದೇ ರಥದ ಕುದುರೆಗಳು. ಪ್ರತಿಯೊಬ್ಬನ ಶ್ರಮ, ಔತ್ಸಾಹ, ಪ್ರೀತಿ, ಬದ್ಧತೆ ಮತ್ತು ಬೆಂಬಲದಿಂದ ರಥವು ಪ್ರಗತಿಯ ದಿಕ್ಕಿನಲ್ಲಿ ನಿರಂತರವಾಗಿ ಮುಂದೆ ಸಾಗುತ್ತದೆ. ಪರಸ್ಪರದ ಸಂಕಲ್ಪ ಶಕ್ತಿ ನಮ್ಮ ಸರ್ವತೋಮುಖ ಬೆಳವಣಿಗೆಯ ಬಲವಾಗುತ್ತದೆ.

ನಮ್ಮ ನುಡಿ ‘ಪರಸ್ಪರದ ಏಳ್ಗೆಗೆ ನಾನು ಬದ್ಧನಾಗಿರುತ್ತೇನೆ!’
ಬನ್ನಿ, ಒಂದಾಗಿ ನಾವು ಹೊಸ ತಾರೆಗಳನ್ನು ದಾಟೋಣ, ಹೊಸ ದಿಕ್ಕುಗಳನ್ನು ಹುಡುಕೋಣ!
ಪ್ರತಿ ಹೆಜ್ಜೆಯೂ ಪರಸ್ಪರದ ಹೆಮ್ಮೆ, ಪ್ರೀತಿಯ ನುಡಿಗಟ್ಟು

# ಪರಸ್ಪರ ನಿರಂತರ

# ಪರಸ್ಪರ

ಬಹು ವಿಭಾಗಗಳು ನಮ್ಮಿಂದ, ನಮಗಾಗಿ

## ನಮ್ಮ ಹೆಮ್ಮೆಯ ಪರಸ್ಪರದ ಸದಸ್ಯರಾಗಿ ಪರಸ್ಪರ ಉಳಿಸುವ ಹಾಗೂ ಬೆಳೆಸುವ ತಮ್ಮ ನಿರ್ಧಾರಕ್ಕೆ ನಮ್ಮ ಶುಭಾಶಯಗಳು!

## ನಮ್ಮ ಹೆಮ್ಮೆಯ ಪರಸ್ಪರಕ್ಕೆ ಸೇರುವುದರಿಂದ ಆಗುವ ಅನುಕೂಲಗಳು:

ಆಹಾರ, ಆರೋಗ್ಯ, ಅಕ್ಷರಗಳಿಗೆ ಸಂಬಂದಿಸಿದ ಪರಸ್ಪರ ಮಾನವೀಯತೆ ನೆರವು.

* ಬಹುಮುಖಿ ಮೂಲಕ ನಿಮ್ಮ ಪ್ರತಿಭೆಗೆ ತಕ್ಕ ವೇದಿಕೆ
* ಪ್ರವಾಸಿ ವಿಭಾಗದ ಮೂಲಕ ಹೊಸ ವೃತ್ತಿ ಹಾಗೂ ಆದಾಯಕ್ಕೆ ಹಾದಿ
* ತಾಂತ್ರಿಕ ನೆರವು ವಿಭಾಗದ ಮೂಲಕ ನಿಮ್ಮ ವೃತ್ತಿಗೆ ಸಂಬಂದಿಸಿದಂತೆ ತಾಂತ್ರಿಕ ನೆರವು ಲಭ್ಯ.
* ಸ್ವಾವಲಂಭಿ ಮೂಲಕ ನವ ಉದ್ಯಮಗಳಿಗೆ ಬೇಕಾದ ಸಂಪನ್ಮೂಲಗಳ ಮೂಲ ಒದಗಿಸಿಕೊಡುವ ಹಾದಿ
* ಕೃಷಿ ವಿಭಾಗದ ಮೂಲಕ ಕೃಷಿಗೆ ಸಂಬಂಧಿಸಿದ ಸಲಹೆಗಳು ಲಭ್ಯ
* ದೇಸಿ ಸಂತೆಯ ಮೂಲಕ ನಿಮ್ಮ ಉತ್ಪನ್ನಗಳ ಮಾರಾಟಕ್ಕೆ ಅವಕಾಶ.
* ಪಾಠ ಶಾಲಾ ವಿಭಾಗದ ಮೂಲಕ ಪರಸ್ಪರದ ವೃತ್ತಿನಿರತರಿಗೆ ವೃತ್ತಿ ಶಿಕ್ಷಣ ಒದಗಿಸುವ ಪ್ರಯತ್ನ.
* ಮಾನವತಾ ವೇದಿಕೆ ಯ ಮೂಲಕ ಪರಸ್ಪರ ಸದಸ್ಯರ ಕಷ್ಟ ಸುಖಗಳಲ್ಲಿ ಭಾಗಿಯಾಗುವುದು.
* ಅರಿವಿನ ಗುರುಕುಲ ದ ಮೂಲಕ ಮಕ್ಕಳ ಹೆಚ್ಚುವರಿ ಶಿಕ್ಷಣ ಕ್ಕೆ ಒತ್ತು ನೀಡುವುದು.
* ವ್ಯಾಪರ ವೇದಿಕೆಯಲ್ಲಿ ನಮ್ಮ ವ್ಯವಹಾರಭಿವೃದ್ದಿಗೆ ಅನೂಕೂಲವಾಗುವಂತ ವೇದಿಕೆ ಸೃಷ್ಟಿಸಲಾಗಿದೆ.
* ಉಳಿತಾಯ ಡಬ್ಬಿಯ ಮೂಲಕ ನಾವು ಹಿರಿಯ ಮತ್ತು ಕಿರಿಯ ರಲ್ಲಿ ಗಳಿಕೆಯನ್ನು ಉಳಿಸುವ ಹವ್ಯಾಸ ಮಾಡಿಸುವುದು.
* ಶಿಕ್ಷಣ ಮತ್ತು ಕೌಶಲ್ಯ ವಿಭಾಗದಲ್ಲಿ ಕೌಶಲ್ಯಬಿವೃದ್ದಿಗೆ ಬೇಕಾದ ವೇದಿಕೆ ಒದಗಿಸಲಾಗುತ್ತದೆ.
* ತುರ್ತುನಿಧಿ ವಿಭಾಗದ ಮೂಲಕ ಹಣಕಾಸು ಸೌಲಭ್ಯ.
* ಜೀವ ಜಲ ವಿಭಾಗದಲ್ಲಿ ಆದಾಯದೊಂದಿಗೆ ಪ್ರಕೃತಿಯೊಂದಿಗಿನ ಹೊಂದಾಣಿಕೆ ಹಾಗೂ ಮುಂದಿನ ಪೀಳಿಗೆಗೆ ಹೊಸ ವಿಚಾರದ ಅರಿವು.

ವ್ಯಾಪಾರ-ವಹಿವಾಟಿಗೆ ಸಂಬಂದಿಸಿದ ನಿರಂತರ ತರಬೇತಿಗಳು, ವಾರ್ಷಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ, ಪರಸ್ಪರ ಪ್ರತಿಷ್ಠಿತ ಪ್ರಶಸ್ತಿಗಳಾದ ವರುಷದ ಕನ್ನಡಿಗ, ಪರಿಶ್ರಮ ಸಾಧಕ, ಯಶಸ್ವಿ ಉದ್ಯಮಿ ಮುಂತಾದ ಪ್ರಶಸ್ತಿ ಪಡೆಯಲು ಅವಕಾಶ.ಗಳಿಕೆ-ಉಳಿಕೆ, ಕಾಸು ಕೂಡಿಕೆ ಉಳಿತಾಯದ ಬಗ್ಗೆ ಅರಿವು.

ಬನ್ನಿ ಪರಸ್ಪರ ಸದಸ್ಯರಾಗಿ, ಪರಸ್ಪರದ ಒಗ್ಗಟ್ಟನ್ನು ಪ್ರದರ್ಶಿಸುತ್ತಾ ಪರಸ್ಪರದ ಹಿರಿಮೆ, ಗರಿಮೆಯನ್ನು ಮತ್ತಷ್ಟು ಉತ್ತುಂಗಕ್ಕೆ ಏರಿಸಲು ಮತ್ತು ಈ ಮೂಲಕ ಪರಸ್ಪರದ ರಥವನ್ನು ಒಟ್ಟಾಗಿ ಮುನ್ನಡೆಸಲು ಕೈ ಜೋಡಿಸಿ.

ಪರಸ್ಪರದ ಏಳ್ಗೆಗೆ ನಾನು ಬದ್ದನಾಗಿರುತ್ತೇನೆ .. ಎಂದು ಬನ್ನಿ!

ಪ್ರತಿದಿನ ಪ್ರಗತಿಯತ್ತ ಪರಸ್ಪರ

# ಪರಸ್ಪರ ನಿರಂತರ

# ಪರಸ್ಪರ
# ಮಾನವತಾ ವೇದಿಕೆ

ನಮ್ಮಿಂದ ನಮಗಾಗಿ ಎಂಬ ಧ್ಯೇಯ ವಾಕ್ಯದಿಂದ ವಿಭಿನ್ನ ವಿಚಾರದಿಂದ ತಲೆಯೆತ್ತಿದ ಸಮೂಹವೇ ನಮ್ಮ ಈ ಪರಸ್ಪರ ಮಾನವತಾ ವೇದಿಕೆ. ಸಮಾಜಮುಖಿ ಕಾರ್ಯಗಳಿಗೆ ಸದಾ ತನ್ನನ್ನು ಒಪ್ಪಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಈ ವೇದಿಕೆಯಿಂದ ತುಂಬಾ ಜನರಿಗೆ ಬಹಳ ಸಹಾಯಕಾರಿಯಾಗಿದೆ.

ಕಷ್ಟದಲ್ಲಿರುವವರಿಗೆ ಕೈ ಹಿಡಿದಿದೆ, ಅನಾರೋಗ್ಯದಲ್ಲಿರುವವರಿಗೆ ಸಹಾಯ ಮಾಡಿದೆ, ಪರಿಸರ ಸ್ನೇಹಿ, ಪರಿಸರ ಕಾಳಜಿಯನ್ನು ಮೈಗೂಡಿಸಿಕೊಂಡಿದೆ. ಮತ್ತು ವಿವಿಧ ಕ್ಷೇತ್ರಗಳಲ್ಲಿ ಎಲೆಮರೆಕಾಯಿಯಂತೆ ತಮ್ಮ ಅನುಪಮ ಸೇವೆಯನ್ನು ಸಲ್ಲಿಸಿದ ಸಾಧಕರನ್ನು ಗುರುತಿಸಿದೆ. ಅಂಥವರನ್ನು ಸಮಾಜ ಗುರುತಿಸುವಂತೆ ಮಾಡಿದೆ.

ಭಿನ್ನವಿಭಿನ್ನವಾದ ವೇದಿಕೆಗಳನ್ನು ಹೊತ್ತು ತಂದು ಪ್ರತಿಯೊಂದು ವೇದಿಕೆ ಮೂಲಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದೆ. ಗುಡಿ ಕೈಗಾರಿಕೆ, ಕರಕುಶಲ, ಕಲೆ, ಸಾಹಿತ್ಯ ಕಲೆ ಮುಂತಾದವುಗಳನ್ನು ಪ್ರೋತ್ಸಾಹಿಸಿ ಬೆಳೆಸಿದೆ. ತಾಯಿನಾಡು, ತಾಯಿ ಭಾಷೆ ಹೀಗೆ ನಾಡು-ನುಡಿಗಾಗಿ ಶ್ರಮಿಸಿದವರನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸಿದೆ.

ವೇದಿಕೆಯಿಂದ ಬಡತನದಿಂದ ಬಳಲುವವರಿಗೆ, ನಿರಾಶ್ರಿತ-ನಿರ್ಗತಿಕರಿಗೆ, ಅನಾಥಾಶ್ರಮ, ವೃದ್ಧಾಶ್ರಮ, ವಿಕಲಚೇತನರಿಗೆ ನೆರವು ನೀಡುವುದು ಹಾಗೂ ಮಾರಕ ರೋಗಗಳಿಂದ ಬಳಲುವವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸಹಾಯ ಮಾಡಿದೆ.

ಈ ವೇದಿಕೆಯಿಂದ ಸಮಾಜದ ಅಭಿವೃದ್ಧಿಗೆ ಸಂಬಂಧಪಟ್ಟ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆಯ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯಿತಿ, ಶಿಕ್ಷಣ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ನೀರಾವರಿ ಇಲಾಖೆ ಇನ್ನಿತರ ಸರ್ಕಾರಿ ಇಲಾಖೆಗಳ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ.

ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ನಾಗರಿಕರಿಗಾಗಿ ಈ ವೇದಿಕೆಯು ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದು ಅವುಗಳನ್ನು  ಅನುಷ್ಠಾನ ಮಾಡಿ ಕಾರ್ಯನಿರ್ವಹಿಸುತ್ತಿದೆ.

ನಾನು-ನನ್ನದು ಎನ್ನುವುದು ಪರ, ನಮ್ಮಿಂದ-ನಮಗಾಗಿ ಎನ್ನುವುದು ಪರಸ್ಪರ.  "ಸೇವಾಹೀ-ಪರಮೋಧರ್ಮ" ಧೇಯ ವಾಕ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಸಾಮಾಜಿಕ ಕಳಕಳಿಯ ಜೊತೆಗೆ ನೆರವಿನ ಅವಶ್ಯಕತೆ ಇರುವವರಿಗೆ ನೆರವಾಗುವುದನ್ನು ರೂಢಿಸಿಕೊಳ್ಳುವುದರ ಜೊತೆಗೆ ಮಾನವಿಯತೆಯ ಸಾರ ತಿಳಿಸುವುದೇ ನಮ್ಮ ಮಾನವತಾ ವೇದಿಕೆಯ ಉದ್ದೇಶ.

# ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು ನಮ್ಮಿಂದ, ನಮಗಾಗಿ

ವ್ಯಾಪಾರ ವೇದಿಕೆ

# ಪರಸ್ಪರ ವ್ಯಾಪಾರ ವಿಭಾಗ

**Start-up, MSME, Franchise, Distribution, Retail** ಕ್ಷೇತ್ರದ ಹಾಗೂ ಸಣ್ಣ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಬಯಸುವಂಥವರಿಗೆ ವೇದಿಕೆ ಕಲ್ಪಿಸಿ, ಪ್ರತಿ ತಿಂಗಳ ಕೊನೆಯ ಭಾನುವಾರ ರಾಜ್ಯದ ವಿವಿಧ ಜಿಲ್ಲೆಯಲ್ಲಿ ವ್ಯಾಪಾರ ವಹಿವಾಟು ನಡೆಸುವ ಯಶಸ್ವಿ ಉದ್ಯಮಿಗಳಿಂದ ಯಶೋಗಾಥೆ/ ಅವರಿಗೆ ಗೌರವಿಸುವುದು, ವ್ಯಾಪಾರ ಅನ್ವೇಷಕರು **(Business Seekers) &** ವ್ಯಾಪಾರ ಪೂರೈಕೆದಾರರು **(Business Providers)** ವ್ಯಾಪಾರ ಭೇಟಿ **(Business meet up)** ಮೂಲಕ ಆದಾಯದ ಮೂಲಕ್ಕೆ ದಾರಿ ಮಾಡಿಕೊಡುವುದೇ ವ್ಯಾಪಾರ ವೇದಿಕೆಯ ಮುಖ್ಯ ಉದ್ದೇಶ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು ಉ ನಮ್ಮಿಂದ, ನಮಗಾಗಿ

# ಪರಸ್ಪರ

## ಅರಿವಿನ ಗುರುಕುಲ ವಿಭಾಗ

ಅರಿವಿನ ಗುರುಕುಲ

ಮಕ್ಕಳಿಂದ ಮಕ್ಕಳಿಗಾಗಿಯೇ ಎಂದು ಸಾದರಿಪಡಿಸಲಾಗಿದೆ. ಬೆಳೆಯುವ ಪೈರು ಮೊಳಕೆಯಲ್ಲಿ ಎಂದು ಹೇಳುತ್ತಾರೆ ಅಂತೆಯೇ ಇಷ್ಟೆಲ್ಲಾ ಕಾರ್ಯ ಚಟುವಟಿಕೆ ಮಾಡುತ್ತಿರುವ ನಮ್ಮ ಪರಸ್ಪರ ಸದಸ್ಯರ ಮಕ್ಕಳೇ ಆಸಕ್ತಿಯಿಂದ ಸೃಜನಶೀಲ ಹಾಗೂ ಸಕಲಕಲಾವಲ್ಲಭರಾಗುವತ್ತ ಹೆಜ್ಜೆ ಇಡುತ್ತಿದ್ದಾರೆ.

ನಮ್ಮ ವ್ಯಾಪಾರ ವಹಿವಾಟಿನ ಕ್ಷೇತ್ರವನ್ನು ಉನ್ನತ ಮಟ್ಟದ ಮುಂದಿನ ಜನಾಂಗಕ್ಕೆ ಕೊಂಡ್ಯೊಯ್ಯುವ ಸದೃಡ ಯುವಪಡೆ ಸೃಷ್ಟಿಸಲು ಅರಿವಿನ ಗುರುಕುಲ ಸಹಕಾರಿಯಾಗಲಿದೆ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು
ನಮ್ಮಿಂದ, ನಮಗಾಗಿ

ಬಹುಮುಖಿ
ಕಲಾಸಕ್ತರ ಸೌರಭ...

# ಪರಸ್ಪರ
# ಬಹುಮುಖಿ ವಿಭಾಗ

ನಮ್ಮ ನಾಡಿನ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ವಿಶೇಷ ವ್ಯಕ್ತಿತ್ವದ ಮಹನೀಯರು, ವಿಭಿನ್ನವಾದ ಪ್ರತಿಭೆಗಳು, ಕಿರುತೆರೆ, ಬೆಳ್ಳಿ ತೆರೆ ಕಲಾವಿದರು / ಕಲಾ ತಂಡಗಳು ಹಾಗೂ ಕಲಾ ತರಬೇತಿದಾರರು/ಕಲಾ ತರಬೇತಿ ತಂಡಗಳ ಪ್ರೋತ್ಸಾಹ, ಪ್ರಚಾರ, ಅಭಿವೃದ್ಧಿ, ಉತ್ತೇಜನದಿಂದ ವಿಶ್ವ ಪರಿಚಯದೆಡೆಗೆ ಕೊಂಡೊಯ್ಯುವುದರ ಜೊತೆ-ಜೊತೆಗೆ ಆದಾಯ ಗಳಿಸುವ ಮೂಲವನ್ನು ಕಂಡುಕೊಳುವುದರ ಜೊತೆಯಲ್ಲಿ ಪೋಷಣೆ ಮಾಡುವ ಮಹತ್ಕಾರ್ಯಗಳನ್ನು ಮಾಡುವ ನಿಟ್ಟಿನಲ್ಲಿ ಪರಸ್ಪರ ಬಹುಮುಖಿ ವೇದಿಕೆ ಕಾರ್ಯನಿರ್ವಹಿಸುತ್ತದೆ.

ಕೆಲವರು ಹಾಡಲು ಬರೆಯಲು ಹಾಗೂ ನೃತ್ಯ ನಾಟಕ ದಂತ ಕಲಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುತ್ತಾರೆ, ಆದರೆ ಸರಿಯಾದ ಮಾರ್ಗ ಹಾಗೂ ತರಬೇತಿ ಸಿಗದೇ ಕೇವಲ ತಮ್ಮ ಪುಟ್ಟ ಪ್ರಪಂಚಕ್ಕೆ ಮಾತ್ರ ಸೀಮಿತರಾಗಿರುತ್ತಾರೆ, ಅಂತ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಪ್ರತಿಭೆಗೆ ವೇದಿಕೆ ದೊರಕಿಸುವುದು ನಮ್ಮ ಪರಸ್ಪರ ಬಹುಮುಖಿಯ ಉದ್ದೇಶ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು ನಮ್ಮಿಂದ, ನಮಗಾಗಿ

ದೇಸಿ ಸಂತೆ

# ಪರಸ್ಪರ
# ದೇಸಿ ಸಂತೆ ವಿಭಾಗ

ದೇಸಿ ಸಂತೆ ಮೂಲಕ ಗುಡಿ ಕೈಗಾರಿಕೆಯ ವಸ್ತುಗಳನ್ನು ಮುನ್ನಲೆಗೆ ತಂದು, ಒಬ್ಬರಿಂದ ಒಬ್ಬರು ಖರೀದಿ ಮಾಡಲು ಪ್ರೇರೆಪಿಸಿ, ನಿರುದ್ಯೋಗ ಸಮಸ್ಯೆಗೆ ಪರ್ಯಾಯ ವ್ಯವಸ್ಥೆ ಮಾಡಿ ಅಂತರ್ಜಾಲ ತಾಣ, ಸಾಮಾಜಿಕ ಜಾಲತಾಣಗಳ ಮೂಲಕ ಮಾರುಕಟ್ಟೆ ಒದಗಿಸಿಕೊಳ್ಳಲು.

ವಿಭಿನ್ನವಾದ ಕೈಯಿಂದ ಮಾಡಿದ ಕಲೆ, ಗುಡಿ ಕೈಗಾರಿಕೆ, ಕರಕುಶಲ ವಸ್ತುಗಳು, ಸ್ಥಳೀಯ ಜನಪ್ರಿಯ ಪದಾರ್ಥಗಳು ಹಾಗೂ ಮನೆಯಲ್ಲಿ ತಯಾರಿಸಿದಂತ ಆಹಾರ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿ ಒಳ್ಳೆ ವ್ಯಾಪಾರ ವೇದಿಕೆ ಕಲ್ಪಿಸಿ ಕೊಡುವುದು.

ಪರಸ್ಪರ ದೇಸಿ ಸಂತೆಯ ವಿಭಾಗವು ಉತ್ಪಾದಕರಿಗೆ ಮತ್ತು ಗ್ರಾಹಕರಿಗೆ ವಿಭಿನ್ನ ಕೌಶಲ್ಯ ಮತ್ತು ಜ್ಞಾನವನ್ನು ಕೊಟ್ಟು ತಮ್ಮ ಉತ್ಪಾದನೆಗಳನ್ನು ಮಾರಾಟ ಮಾಡಲು ದೇಸಿ ಸಂತೆ ಯನ್ನು ಪರಿಚಯಿಸಿದೆ.

**ದೇಸಿ ಸಂತೆಯ ಉಪಯುಕ್ತತೆಗಳು :**

ಉತ್ಪಾದಕರ ಉತ್ಪನ್ನಗಳನ್ನು ಸ್ಥಳಿಯರಿಗೆ ಪರಿಚಯಿಸುವುದು ಹಾಗೂ ನಾಗರೀಕರಿಗೆ, ಮನೆ-ಮನಗಳಿಗೆ ಸುಲಭವಾಗಿ ದೇಸಿ ಉತ್ಪನ್ನಗಳನ್ನು ತಲುಪಿಸುವುದು. ಬಳಕೆದಾರರನ್ನು ನೇರವಾಗಿ ಭೇಟಿಯಾಗುವುದು ಮತ್ತು ಬಳಕೆದಾರರಿಗೆ ಉತ್ಪನ್ನಗಳ ಗುಣಮಟ್ಟದ ಬಗ್ಗೆ ತಿಳಿಸುವ ಪ್ರಯತ್ನ ಸುಲಭ ಸಾಧ್ಯವಾಗುವುದು.

ನಮ್ಮಿಂದ-ನಮಗಾಗಿ ಎಂದು ಎಲ್ಲಾ ದೇಸಿ ಸಂತೆ ವಿಭಾಗದ ಸದಸ್ಯರು ತಮ್ಮ ಅವಶ್ಯಕತೆಗೆ ಬೇಕಾದ ಉತ್ಪನ್ನಗಳನ್ನು ನಮ್ಮ ನಮ್ಮಲ್ಲಿಯೇ ಕೊಳ್ಳಲು / ಮಾರಾಟ ಮಾಡಲು ಶಪಥ ಮಾಡುವುದು.

ಪ್ರಯತ್ನ ನಮ್ಮದು. .....

**ಬನ್ನಿ, ಸ್ವದೇಶಿ ಜಾಗೃತಿಯಲ್ಲಿ ಪಾಲ್ಗೊಳ್ಳಿ**
**"ಸ್ವದೇಶಿ ಬಳಸಿ, ದೇಶ ಉಳಿಸಿ"**

# ಪರಸ್ಪರ ನಿರಂತರ

# ಪರಸ್ಪರ
# ಜೀವ ಜಲ

ಒಂದು ಕಾಲದಲ್ಲಿ ನೆಲದಿಂದ ಮೇಲಕ್ಕೆ ಹೊರ ಚಿಮ್ಮುತ್ತಿದ್ದ ಕೆಲವು ನೀರ ಚಿಲುಮೆಗಳು ಈಗ ತಮ್ಮ ಕೆಲಸವನ್ನು ನಿಲ್ಲಿಸಿವೆ. ಓವರ್ ಫ್ಲೋ ಆಗುತ್ತಿದ್ದ ಕೊಳವೆ ಬಾವಿಗಳು ಆಯಾಸವಾಗಿ ತಮ್ಮ ಕೆಲಸವನ್ನು ನಿಲ್ಲಿಸಿವೆ. ಮನೆ ಮುಂದೆ ಕುಡಿಯುವ ನೀರಿಗಾಗಿ ಇದ್ದ ಬಾವಿಗಳಲ್ಲಿ ನೀರಿಲ್ಲದೆ ಖಾಲಿಯಾಗಿವೆ.ಎಲ್ಲಿ ನೋಡಿದರಲ್ಲಿ ಕೊಳವೆ ಬಾವಿಯ ನೀರು. ನೀರಿನ ಬಳಕೆ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

ಪರಸ್ಪರರು ಏನು ಮಾಡಬೇಕು:

* ಸಾಧ್ಯವಾದಷ್ಟು ಅರಣ್ಯ ಇಲಾಖೆಯ ಜೊತೆ ಕೈ ಜೋಡಿಸಿ ಸಸಿ ನೆಟ್ಟಾದರೂ ಅರಣ್ಯ ಮರು ನಿರ್ಮಾಣ ಮಾಡೋಣ.
* ಹಸಿರಿನ ಮರು ಸ್ಥಾಪನೆಯಿಂದ ಭೂಮಿಗೆ ತಂಪಾಗುತ್ತದೆ. ಭೂಮಿ ನಮಗೆ ತಂಪನ್ನು ಕೊಡುತ್ತಾಳೆ.
* ಎಲ್ಲವೂ ಪರಸ್ಪರ ಕೊಡು ಕೊಳ್ಳುವಿಕೆ.
* ನಾವು ಬಳಕೆ ಮಾಡುವ ನೀರಿನಲ್ಲಿ ಮಿತವ್ಯಯ ಸಾಧಿಸೋಣ.
* ಕೈಕಾಲು ತೊಳೆಯುವುದಕ್ಕೆ ಮಿತ ನೀರು ಬಳಸೋಣ.
* ಬಟ್ಟೆ ಒಗೆಯುವುದಕ್ಕೆ ಮಿತವಾಗಿ ಸಾಬೂನು ಬಳಸೋಣ.
* ನೀರಾವರಿಗೆ ಮಿತ ನೀರಾವರಿ ಮಾಡೋಣ.
* ಕೈ ಕಾಲು ತೊಳೆದ, ಪಾತ್ರೆ ತೊಳೆದ ನೀರನ್ನು ಮರಗಳಿಗೆ ಉಣಿಸೋಣ.
* ನೆಲಕ್ಕೆ ಹೊದಿಕೆ ಹಾಕಿ ತೇವಾಂಶ ಸಂರಕ್ಷಿಸೋಣ.
* ಅತಿಯಾದ ನೀರಿನ ಬಳಕೆಯನ್ನು ಕಡಿಮೆ ಮಾಡಿ ಮಿತ ಬಳಕೆ ಮಾಡೋಣ.
* ಇದು ನಮ್ಮ ಮಕ್ಕಳಿಗೆ ನಾವು ನಮ್ಮ ಭೂಮಿಯನ್ನು ಸುಸ್ಥಿತಿಯಲ್ಲಿ ಕೊಡಲು ಮಾಡಬೇಕಾದ ಅಗತ್ಯ ಕೆಲಸ.

ಪ್ರಕೃತಿ ಮುನಿಯುವ ಮುನ್ನ ನಾವೇ ಪ್ರಕೃತಿಗೆ ಶರಣಾಗಬೇಕು. ಇಲ್ಲವಾದರೆ ಸಹಿಸಲಾಗದ ಪ್ರಹಾರದ ಮೂಲಕ ಅದು ನಮಗೆ ರೋಗ ರುಜಿನಗಳ ಮೂಲಕ ಕಷ್ಟವನ್ನು ಕೊಟ್ಟೇ ಕೊಡುತ್ತದೆ.

ನಿಮ್ಮ ವ್ಯಾಪಾರ ವಹಿವಾಟಿನ ಸ್ಥಳದಲ್ಲಿ ನೈಸರ್ಗಿಕ ಮಣ್ಣಿನ ಮಡಿಕೆಯಲ್ಲಿ ನೀರನ್ನು ಇಡಿ, ಗ್ರಾಹಕರಿಗೆ ಶುದ್ಧ ಕುಡಿಯುವ ನೀರು ಸಿಗುವುದರೊಂದಿಗೆ ಜಲಜಾಗೃತಿ ಮೂಡಿಸಿ..

ನೆನಪಿರಲಿ ನಾವು ನಮ್ಮ ಮೂರನೇ ತಲೆಮಾರಿನ ಪ್ರಕೃತಿಯನ್ನು ಎರವಲು ಪಡೆದು ಬಳಸುತ್ತಿದ್ದೇವೆ..

"ಇತಿಮಿತಿಯ ಬಳಕೆ ಕಡ್ಡಾಯವಾಗಿರಲಿ"

ಹೀಗೆ ಒಂದೊಂದು ವಿಭಾಗವು ತನ್ನ ವಿನೂತನ ಹಾಗೂ ವಿಭಿನ್ನವಾದ ಪ್ರಯತ್ನದಿಂದ ಒಂದು ಹೊಸ ಕ್ರಾಂತಿಯನ್ನು ಶುರು ಮಾಡುತ್ತಿದೆ.

ಒಬ್ಬ ಯಾವುದೇ ಕ್ಷೇತ್ರದ ಸಾಮಾನ್ಯ ಮನುಷ್ಯನು ನಮ್ಮ ಪರಸ್ಪರಕ್ಕೆ ಸೇರಿದರೆ ಅವರಿಗೂ ಉಪಯುಕ್ತವಾಗುವಂತಹ ಎಲ್ಲಾ ಕ್ಷೇತ್ರಗಳಲ್ಲೂ ವಿಭಾಗಗಳನ್ನು ಹೊಂದಿರುವುದೇ ಪರಸ್ಪರ 14 ವಿಭಾಗಗಳ ವಿಶಿಷ್ಟತೆ.

ವಿಶಿಷ್ಟತೆ ಅಷ್ಟೇ ಅಲ್ಲ, ವೈವಿಧ್ಯತೆಯಲ್ಲಿ ಏಕತೆ.

## "ಪ್ರತಿದಿನ ಪ್ರಗತಿಯತ್ತ ಪರಸ್ಪರ"

# ಪರಸ್ಪರ ನಿರಂತರ

# ಪರಸ್ಪರ
# ಕೃಷಿ ವಿಭಾಗ

ಸಾವಯುವ ರೀತಿಯಲ್ಲಿ ನಾವು ಕಡಿಮೆ ಬಂಡವಾಳದಲ್ಲಿ ಹೆಚ್ಚು ಆದಾಯ ತಂದು ಕೊಡುವಂತಹ ಕೃಷಿಯೇತರ ಚಟುವಟಿಕೆಗಳ ಮಾಹಿತಿಯನ್ನು ಮತ್ತು ಕೃಷಿಯಲ್ಲಿ ಕಡಿಮೆ ಬಂಡವಾಳದಲ್ಲಿ ಯಶಸ್ವಿ ಆದಂತಹ ಸಂಪನ್ಮೂಲ ವ್ಯಕ್ತಿಗಳ ನಡುವೆ ಸಂಪರ್ಕ ಕಲ್ಪಿಸಿ, ಇತರರಿಗೂ ಮಾದರಿಯಾಗುವಂತೆ ಕೃಷಿ ಪದ್ಧತಿಯನ್ನು ಕಲಿಯುವದರ ಜೊತೆಗೆಹಣವನ್ನು ಸಂಪಾದಿಸಿ ಮಣ್ಣಿನ ಫಲವತ್ತತೆಯನ್ನು ಹಾಗೂ ಮಾನವನ ಆರೋಗ್ಯ ಕೂಡ ಕಾಪಾಡಿಕೊಳ್ಳಬಹುದುಸಾವಾಯವ ಕೃಷಿ ಉತ್ಪನ್ನಗಳ ತಯಾರಿಕೆಗೆ ಉತ್ತೇಜನ ಹಾಗೂ ಮಾರುಕಟ್ಟೆ ಸ್ಥಾಪನೆ. ಜೊತೆಯಲ್ಲಿ ಭೂರಹಿತ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವರಿಗೆ ತಾರಸಿ ತೋಟ, ಅಣಬೆ ಬೇಸಾಯ, ನಾಟಿ ಕೋಳಿ ಸಾಕಾಣಿಕೆ, ಜೇನು ಕೃಷಿ, ನರ್ಸರಿ, ಸಮುದಾಯ ಕೃಷಿಯ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಿ ಸ್ವಾವಲಂಬಿ ಬದುಕನ್ನು ರೂಪಿಸುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸುವುದು.

## ಪರಸ್ಪರ ನಿರಂತರ

ಪರಸ್ಪರ

ಬಹು ವಿಭಾಗಗಳು ನಮ್ಮಿಂದ, ನಮಗಾಗಿ

# ಪರಸ್ಪರದ ಉಗಮ

ಸಮಾನ ಮನಸ್ಕರರು, ಸಮಾಜದ ಎಲ್ಲಾ ಕ್ಷೇತದಲ್ಲಿ ಸ್ವಾವಲಂಬಿ ಮತ್ತು ಸ್ವಾಭಿಮಾನ ಬದುಕು ಕಟ್ಟಿಕೊಂಡವರು, ಕಟ್ಟಿಕೊಳ್ಳುತ್ತಿರುವವರು ಮತ್ತು ಕಟ್ಟಿಕೊಳ್ಳಲು ಬಯಸಿ ಬರುವ ಎಲ್ಲರನ್ನೂ ಗಮನದಲ್ಲಿಟ್ಟುಕೊಂಡು ನಮ್ಮಿಂದ ನಮ್ಮವರಿಗಾಗಿ ನಮ್ಮವರು ಸಂಕಷ್ಟ ಅಥವಾ ತೊಂದರೆಗಳು ಬಂದಾಗ ಅವರಿಗೆ ಸಹಾಯ-ಸಹಕಾರ-ನೆರವು ಅಥವಾ ಭರವಸೆ ನೀಡುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಬೇಕು ಎಂಬ ದೂರಾಲೋಚನೆ ಯೊಂದಿಗೆ ಒಂದು ವೇದಿಕೆ

ಸಿದ್ಧಗೊಂಡು ಅದಕ್ಕೆ " ಪರಸ್ಪರ" ಎಂಬ ನಾಮಕರಣ ಮಾಡಲಾಯಿತು. "ಪರಸ್ಪರದ ಉದ್ದೇಶ."

ಸ್ವಾವಲಂಬಿ ಮತ್ತು ಸ್ವಾಭಿಮಾನ ಬದುಕು ಕಟ್ಟಿಕೊಳ್ಳುವ ಪ್ರತಿ ವ್ಯಕ್ತಿ ಮತ್ತು ಅವರ ಅವಲಂಬಿತ ಕುಟುಂಬಕ್ಕೆ ನೇರವಾಗುವ ನಿಟ್ಟಿನಲ್ಲಿ ಮುಖ್ಯವಾಗಿ ರಾಜ್ಯದ ಎಲ್ಲಾ ಸಮಾನ ಮನಸ್ಕರು ಒಗ್ಗೂಡಿ

## ಅರಿವು ಆಹಾರ ಮತ್ತು ಆರೋಗ್ಯ

ಇವುಗಳನ್ನು ಮುಖ್ಯವಾಗಿ ಗಮನದಲ್ಲಿ ಇಟ್ಟುಕೊಂಡು ನಮ್ಮ ಪರಿವಾರಕ್ಕೆ ನೆರವು ನೀಡುವುದು ಪರಸ್ಪರದ ಮೂಲ ಉದ್ದೇಶವಾಗಿದೆ.

ಅರಿವು: ನಮ್ಮ ಪರಿವಾರದ ಸದಸ್ಯರು ಯಾರಾದರೂ ಆರ್ಥಿಕವಾಗಿ ಸಂಕಷ್ಟದಲ್ಲಿದ್ದು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅಥವಾ ಅವರ ವಯಕ್ತಿಕ ಉನ್ನತ ಸಾಧನೆ/ವಿದ್ಯಾಭ್ಯಾಸಕ್ಕೆ ನೆರವು ಅಥವಾ ಸಹಾಯ ಮಾಡುವುದು ಮತ್ತು ಪ್ರಸ್ತುತ ನಾವುಗಳು ಮಾಡುತ್ತಿರುವ ವೃತ್ತಿಯಲ್ಲಿ/ಆಸಕ್ತಿ ಇರುವ ವೃತ್ತಿಯಲ್ಲಿ ಅವರಿಗೆ ಇನ್ನೂ ಹೆಚ್ಚಿನ ಜ್ಞಾನ/ಕೌಶಲ್ಯ/ತರಬೇತಿ ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ.

"ಆಹಾರ." ಇದು ಪ್ರತಿಯೊಬ್ಬರಿಗೂ ಅವಶ್ಯಕ ಮತ್ತು ಅನಿವಾರ್ಯ. ಇಲ್ಲಿ ನಮ್ಮ ಜೀವನದ ಪ್ರತಿನಿತ್ಯದ ಹೋರಾಟ ಕೂಡ ಇದೆ ಆಗಿದೆ. ಹಾಗೆಂದು ನಾವು ಇಲ್ಲಿ ಯಾರು ಯಾರಿಗೂ ಊಟ-ಉಪಹಾರ ನೀಡುವುದಿಲ್ಲ. ಬದಲಿಗೆ ಅವರ ಬದುಕಿಗೆ, ನಿತ್ಯದ ಆಹಾರಕ್ಕೆ, ಅವರಿಗೆ ಅನುಭವ ಇರುವ ಆಸಕ್ತಿ ಇರುವ ಕ್ಷೇತ್ರದಲ್ಲಿ ಅವರಿಗೆ ಅಗತ್ಯವಿರುವ ಸಾಧನ-ಸಲಕರಣೆ, ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರ / ಸರ್ಕಾರೇತರ/ ಖಾಸಗಿ/ಸಂಘ ಸಂಸ್ಥೆ ಗಳೊಂದಿಗೆ ಸಂಪರ್ಕ ಬೆಳೆಸುವುದು ಮತ್ತು ಅವರ ನಿತ್ಯದ ದುಡಿಮೆಗೆ ದಾರಿತೋರಿಸುವುದು ಇದರ ಉದ್ದೇಶ.

"ಆರೋಗ್ಯ." ಮೇಲಿನ ಎರಡು ಗುರಿ ಸಾಧನೆಗಳಿಗೆ ಅತೀ ಮುಖ್ಯವಾದದ್ದು. ಆರೋಗ್ಯ ಚೆನ್ನಾಗಿ ಇದ್ದರೆ ಸಕಲವೂ ಸಾಧ್ಯ. ಈ ಮೂರು ಕ್ಷೇತ್ರದಲ್ಲಿ ನಾವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರೆ ಪ್ರತಿಯೊಬ್ಬ ಶ್ರಮಿಕನ ಜೀವನ ಸುಂದರ......

## ಪರಸ್ಪರ ಮೂಲ ಮಂತ್ರ

1. ಮಾನವೀಯತೆ. 2. ಶಿಸ್ತು. 3. ಕಠಿಣ ಪರಿಶ್ರಮ.

## ಇವುಗಳ ಫಲಿತಾಂಶ: ಸಾಧನೆ ಮತ್ತು ಸಾರ್ಥಕತೆ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು ಒಂದೇ ನಮ್ಮಿಂದ, ನಮಗಾಗಿ

## ಪರಸ್ಪರ

## ಪಾಠಶಾಲಾ ವಿಭಾಗ

ಪಾ ಠ ಶಾ ಲಾ

ಶಾಲೆಯಲ್ಲಿ ಮಕ್ಕಳಿಗೆ ಪಾಠ ಭೋದನೆ ಮಾಡಿದ ಹಾಗೆ ಪ್ರತಿಯೊಂದು ಉಪಯುಕ್ತ ಸೇವೆಗಳ ಮಾಹಿತಿ ಹಾಗೂ ಅರ್ಜಿ ಹಾಕುವುದನ್ನು ಆನ್ಲೈನ್ ತರಬೇತಿ ಮುಖಾಂತರ ನಾಳೆಯ ಬದುಕಿಗಾಗಿ ಸದಸ್ಯರಿಗೆ ಕಲಿಸಿ ಆದಾಯದ ಮೂಲ ಹೆಚ್ಚಿಸುವುದು. ಪರಸ್ಪರ ಪಾಠಶಾಲಾದ ಮುಖ್ಯ ಧ್ಯೇಯವೇ "ಹೆಚ್ಚು ಕಲಿಕೆ, ಹೆಚ್ಚು ಗಳಿಕೆ".

## ಪರಸ್ಪರ ನಿರಂತರ

ಪರಸ್ಪರ ಬಹು ವಿಭಾಗಗಳು ನಮ್ಮಿಂದ, ನಮಗಾಗಿ

# ಪರಸ್ಪರ ಪ್ರವಾಸಿ ವಿಭಾಗ

ಪ್ರವಾಸಿ

ಪ್ರತಿಯೊಬ್ಬರೂ ಕೂಡ ಪ್ರವಾಸಕ್ಕೆ ಹೋಗುವ ಮೂಲಕ ರಿಲ್ಯಾಕ್ಸ್ ಮಾಡಿಕೊಳ್ಳಲು ಬಯಸುತ್ತಾರೆ. ಜನರು ದಿನದಿಂದ ದಿನಕ್ಕೆ ಹೆಚ್ಚು ಪ್ರವಾಸಿ ಮುಖಿಯಾಗುತ್ತಿರುವ ಕಾರಣ ಈಗ ಪ್ರವಾಸೋದ್ಯಮ ಹಿಂದಿಗಿಂತಲೂ ಹೆಚ್ಚು ಬೃಹತ್ತಾಗಿ ಬೆಳೆಯುತ್ತಿದೆ. ಪ್ರವಾಸವು ದೇಶದ ಆರ್ಥಿಕ ಸ್ಥಿತಿಗತಿಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ, ಬಹಳಷ್ಟು ಜನರು ಪ್ರವಾಸ ಉದ್ಯಮದಲ್ಲಿ ಮಾರ್ಗದರ್ಶಿಯಾಗಿ ಕೆಲಸ ಮಾಡಲು ಆಸಕ್ತಿ ತೋರುತ್ತಿದ್ದಾರೆ ಆದರೆ ಅವರಿಗೆ ಯಾವುದೇ ತರಬೇತಿ ನೀಡಲು ಯಾವುದೇ ಸಂಸ್ಥೆಗಳು ಇಲ್ಲದ ಕಾರಣ ಪ್ರವಾಸೋದ್ಯಮವನ್ನೇ ನಂಬಿ ಅದರಲ್ಲೇ ಆದಾಯ ಕಂಡುಕೊಳ್ಳುತ್ತಿರುವ ಜನರು ನಮ್ಮಲ್ಲಿ ಕೆಲವರು ಮಾತ್ರ ಇದ್ದಾರೆ, ಅವರ ಜೀವನಕ್ಕೂ ಒಂದು ಭರವಸೆ ಮೂಡುವಂತಹ ಆಶಾಕಿರಣ ನಮ್ಮ ಪರಸ್ಪರ ಪರಿವಾರ ಪ್ರವಾಸಿ ವಿಭಾಗದ ಮೂಲಕ ಆದಾಯ ಮಾಡಿಕೊಡುತ್ತದೆ.

ಈಗಾಗಲೇ ಪ್ರವಾಸಿ ಮಾರ್ಗದರ್ಶಿ ತರಬೇತಿ ಕಾರ್ಯಚಟುವಟಿಕೆಗಳನ್ನು ಆರಂಭಿಸಿ ಪರಿಣಿತ ಮಾರ್ಗದರ್ಶಿಗಳು, ಹೋಟೆಲ್, ರೆಸಾರ್ಟ್ ಬುಕಿಂಗ್ ಏಜೆಂಟ್ ಗಳು ಹಾಗೂ ಬಸ್, ರೈಲು, ವಿಮಾನ ಟಿಕೆಟ್ ಬುಕಿಂಗ್ ಮೂಲಕ ಹಣವನ್ನು ಗಳಿಸುವ ಮೂಲಕ ಸದೃಢ ಹೆಜ್ಜೆಯನ್ನು ಇಡಲು ಅನುವುಮಾಡಿಕೊಡುತ್ತದೆ.

ರಾಜ್ಯದ ಎಲ್ಲಾ ಜಿಲ್ಲೆಯ ಪಾರಂಪರಿಕ ಪ್ರವಾಸಿ ತಾಣಗಳಾದ ಧಾರ್ಮಿಕ ದೇವಾಲಯ, ಮಸೀದಿಗಳು, ಚರ್ಚ್ ಗಳು, ಕೋಟೆಗಳು, ಬೆಟ್ಟಗಳು, ನೈಸರ್ಗಿಕ ತಾಣಗಳು, ಜಲಪಾತಗಳು, ವಸತಿಗೃಹಗಳು, ಜಲ ಕ್ರೀಡೆ ಗಳು, ರೆಸಾರ್ಟ್, ಪಾರ್ಟಿ ಹಾಲ್, ರಾಷ್ಟ್ರೀಯ ಉದ್ಯಾನವನಗಳು, ಪಕ್ಷಿಧಾಮಗಳು, ಟ್ರೆಕ್ಕಿಂಗ್ ಸ್ಥಳಗಳು, ಗಿರಿಧಾಮಗಳು ಮುಂತಾದವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅಲ್ಲಿ ಹಣಗಳಿಕೆ ಮಾರ್ಗಗಳನ್ನು ಜೋಡಿಸಬಹುದು.

ಜೊತೆಯಲ್ಲಿ ಕೇವಲ ಹಣ ಗಳಿಕೆಯು ಮುಖ್ಯವಾಗದೇ ಮುಂದಿನ ಜನಾಂಗಕ್ಕೆ ಸಹ ನಮ್ಮ ಪ್ರಕೃತಿ ಹಾಗೂ ಪಾರಂಪರಿಕ ಇತಿಹಾಸ ಉಳಿಸುವ ಜವಾಬ್ದಾರಿ ಸಹ ನಮ್ಮಗಳ ಮೇಲಿರುವ ಹೊಣೆಗಾರಿಕೆ ಹಾಗಾಗಿ ನಾವು ಜನಜಾಗೃತಿ ಮೂಡಿಸುವ ಫಲಕಗಳನ್ನು ಅಳವಡಿಸಿ ಕೋಟೆಗಳು, ದೇವಳಗಳು, ಜಲಪಾತ, ನದಿ, ಸಮುದ್ರದ ದಡಗಳಲ್ಲಿ ಸ್ಥಾಪಿಸಿ, ಪ್ಲಾಸ್ಟಿಕ್ ಮುಕ್ತ ಸ್ಥಳಗಳನ್ನಾಗಿ ಮಾಡಲು ಮುಂದಾಗಬೇಕಾಗಿದೆ.

ಪರಸ್ಪರ ಪ್ರವಾಸಿ ವಿಭಾಗದ ವಿವಿಧ ಜಿಲ್ಲೆಗಳ ಪರಿವಾರದ ಸಹಕಾರದೊಂದಿಗೆ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ನಮ್ಮ ಪರಿವಾರ ಈಗಾಗಲೇ ನೆಲೆಯೂರಿದ್ದು ಪ್ರವಾಸಿಗರಿಗೆ ಆತಿಥ್ಯನೀಡಲುಸದಾ ಸಿದ್ದರಿರುವ ಸಹೃದಯ ತಂಡ ನಿರ್ಮಾಣವಾಗಿದೆ.

ಪರಸ್ಪರ ಪ್ರವಾಸಿ ವಿಭಾಗದ ಮೂಲಕ ವಿಶ್ವ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಲ್ಲಿ ವಸತಿ ವ್ಯವಸ್ಥೆ ಸಹ ಪರಸ್ಪರ ತಂಡವೇ ಕಾರ್ಯನಿರ್ವಹಣೆ ಮಾಡುತ್ತಿದೆ.

**ಪರಸ್ಪರ ನಿರಂತರ**

ಪರಸ್ಪರ
ಬಹು ವಿಭಾಗಗಳು ನಮ್ಮಿಂದ, ನಮಗಾಗಿ

ಕೌಶಲ್ಯ

# ಪರಸ್ಪರ

## ಶಿಕ್ಷಣ ಮತ್ತು ಕೌಶಲ್ಯ ವಿಭಾಗ

ಶಿಕ್ಷಣ ಮತ್ತು ಕೌಶಲ್ಯ ವಿಭಾಗದಲ್ಲಿ ನಾವು ಆಸಕ್ತಿಗೆ ತಕ್ಕ ಆದಾಯ ಬರುವ ಕೌಶಲ್ಯ, ಆಯಾ ಕಾಲಕ್ಕೆ ತಕ್ಕಂತೆ ಗುರು ಶಿಷ್ಯ ಪದ್ಧತಿಯ ಅರ್ಹತೆ ಹಾಗೂ ಆಸಕ್ತಿಗೆ ಅನುಗುಣವಾಗಿ ಉದ್ಯೋಗ ಕೌಶಲ್ಯಗಳ ಸಾಮಾನ್ಯ ಜ್ಞಾನ ಮತ್ತು ಸಂಹವಹನ ಕೌಶಲ್ಯ ಕಲೆಗಳ ಕಲಿಕೆ ಮಾಡಿಕೊಂಡು ವ್ಯಕ್ತಿತ್ವ ವಿಕಾಸನವೂ ಕೂಡ ನಾವಿಲ್ಲಿ ಕಲಿಯುತ್ತೇವೆ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು
ನಮ್ಮಿಂದ, ನಮಗಾಗಿ

ಸ್ವಾವಲಂಬಿ

# ಪರಸ್ಪರ ಸ್ವಾವಲಂಬಿ ವಿಭಾಗ

ಸ್ವಾವಲಂಬಿ ಮುಖಾಂತರ ಮಾನಸಿಕವಾಗಿ, ಆರ್ಥಿಕವಾಗಿ ಹೇಗೆ ಪ್ರಬಲರನ್ನಾಗಿಸುವುದು ಎಂಬುದನ್ನು ತಿಳಿಸಿ, ಹೊಸ ಯೋಜನೆಗಳನ್ನು ಹೊತ್ತು ತಂದು ಪರಸ್ಪರ ಸದಸ್ಯರಿಗೆ ಬೆನ್ನೆಲುಬಾಗಿ ನಿಲ್ಲುವುದು, ವೃತ್ತಿ ಕೌಶಲ್ಯಗಳನ್ನು ಹೊಂದಿದ್ದು ಆರ್ಥಿಕವಾಗಿ ಕಷ್ಟದಲ್ಲಿರುವವರಿಗೆ ಸಹಾಯ ಹಸ್ತದ ನೆರವು ನೀಡಿ ಅವರಿಗೆ ಜೀವನೋಪಾಯ ಕಲ್ಪಿಸುವ ವ್ಯವಸ್ಥೆ ಹಾಗೂ ಸರ್ಕಾರದ ವಿವಿದ ಯೋಜನೆಗಳ ಫಲಾನುಭವಿಗಳಾಗಿಸುವ ನಿಟ್ಟಿನಲ್ಲಿ ಇಷ್ಟೆಲ್ಲಾ ಭರವಸೆ ದೊರಕಿದ ಮೇಲೆ ನಮಗೆ ಖಂಡಿತವಾಗಿಯೂ ಇನ್ನು ಹೆಚ್ಚಿನ ಸೇವೆಗಳನ್ನ ನೀಡಬಹುದು ಎಂಬ ದೃಢವಾದ ಮನೋಸ್ಥೈರ್ಯ ಮೂಡುತ್ತದೆ, ಅದಕ್ಕೆ ಅಗತ್ಯವಿರುವ ಹೂಡಿಕೆಯನ್ನು ಸ್ವಾವಲಂಬಿ ಮುಖಾಂತರ ಆರ್ಥಿಕ ಬೆಂಬಲವನ್ನು ಕೂಡ ಪರಸ್ಪರ ನೀಡುತ್ತದೆ.

ಸಮಾಜದಲ್ಲಿನ ಹಲವು ಕಟ್ಟುಪಾಡುಗಳು, ಅಚಾರ- ವಿಚಾರಗಳಿಂದ ಮಹಿಳೆಯರಿಗೆ ಅನಾನುಕೂಲ ಆಗಿರುವುದೇ ಹೆಚ್ಚು. ಇದರಿಂದ ಪಾರಾಗಲು ಮಹಿಳೆಯರು ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಳ್ಳಬೇಕು. ಅವರನ್ನು ಸಬಲೀಕರಣದ ಹಾದಿಯಲ್ಲಿ ತರುವುದು ಕರ್ತವ್ಯ.

ಹೆಚ್ಚಾಗಿ ಮಹಿಳೆಯರು ಸಂಸ್ಕೃತಿ, ಆಚಾರ ವಿಚಾರವನ್ನು ಉಳಿಸಿ ಬೆಳೆಸುವ ಮಹತ್ವದ ಜವಾಬ್ದಾರಿ ಹೊಂದಿದ್ದಾರೆ. ಈಗ ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಮುದಾಯವು ಸಂಕುಚಿತ ಭಾವನೆ ಇಲ್ಲದೇ ಸಮಾಜದ ಎಲ್ಲಾ ವರ್ಗದೊಂದಿಗೆ ಸಮಾನ ಭಾವನೆ ಹೊಂದ ಬೇಕಾಗಿದೆ.

## ಪರಸ್ಪರ ನಿರಂತರ

ಪರಸ್ಪರ
ಬಹು ವಿಭಾಗಗಳು ನಮ್ಮಿಂದ, ನಮಗಾಗಿ

# ಪರಸ್ಪರ
# ತಾಂತ್ರಿಕ ನೆರವು ವಿಭಾಗ

ತಾಂತ್ರಿಕ ನೆರವು

ನಾವು ನೀಡುತ್ತಿರುವ ಸೇವೆಯಲ್ಲಿ ನಮಗೆ ಏನಾದರೂ ತಾಂತ್ರಿಕ ತೊಂದರೆಗಳು ಎದರು ಆದಾಗ ಅಥವಾ ಇನ್ನಿತರ ಸಮಸ್ಯೆಗಳು ಎದುರಾದಾಗ ಯಾವುದೇ ರೀತಿ ಫಲಾಪೇಕ್ಷಿಸದೆ ಅಂತರಜಾಲದ ಮುಖಾಂತರ ಅವರ ಸಮಸ್ಯೆಗೆ ಪರಿಹಾರ ನೀಡುತ್ತಾರೆ, ಪರಸ್ಪರರು ತಾಂತ್ರಿಕ ವಿಭಾಗದವರನ್ನು ತಾಂತ್ರಿಕ ವೀರರು ಅಥವಾ ತಾಂತ್ರಿಕ ಪಡೆ ಎಂದೇ ಕರೆಯುತ್ತಾರೆ. ಪರಸ್ಪರ ತಾಂತ್ರಿಕ ವೀರರಿಂದ ನಮಗೆ ಯಾವುದೇ ತಾಂತ್ರಿಕ ದೋಷ ಉಂಟಾದಲ್ಲಿ ತ್ವರಿತವಾಗಿ ಪರಿಹರಿಸಿಕೊಳ್ಳುತ್ತಿದ್ದೇವೆ.

"ಪ್ರತಿದಿನ ಪ್ರಗತಿಯತ್ತ ಪರಸ್ಪರ"

**ಪರಸ್ಪರ ನಿರಂತರ**

ಪರಸ್ಪರ
ಬಹು ವಿಭಾಗಗಳು
ನಮ್ಮಿಂದ, ನಮಗಾಗಿ

# ಪರಸ್ಪರ ತುರ್ತುನಿಧಿ

ತುರ್ತು ನಿಧಿ
EMERGENCY FUND

ಉತ್ತಮ ಭವಿಷ್ಯಕ್ಕಾಗಿ, ಜೀವ ವಿಮೆ, ಆರೋಗ್ಯ ವಿಮೆ ಮಾತ್ರವಲ್ಲದೇ ತುರ್ತು ನಿಧಿ ಕೂಡ ಬಹಳ ಮುಖ್ಯ. ಯಾಕೆಂದರೆ ಇದು ಅನಿರೀಕ್ಷಿತ ಹಣಕಾಸಿನ ಪರಿಸ್ಥಿತಿಗಳಿಂದ ನಿಮ್ಮನ್ನು ಕಾಪಾಡುತ್ತದೆ. ಜೀವನಕ್ಕೆ ಭದ್ರತೆ ನೀಡುತ್ತೆ.

ವೈದ್ಯಕೀಯ ತುರ್ತುಸ್ಥಿತಿಗಳು ಅಥವಾ ವ್ಯಾಪಾರ / ಉದ್ಯೋಗ ನಷ್ಟದಂತಹ ಸವಾಲುಗಳು ಉದ್ಭವಿಸಿದಾಗ ವೆಚ್ಚಗಳನ್ನು ಭರಿಸಲು ಸಹಾಯ ಮಾಡುತ್ತದೆ.

ಈ ವಿಭಾಗದ ಮೂಲಕ ಆರ್ಥಿಕ ಸಹಾಯ ಅಸ್ತದ ವಿಭಿನ್ನ ಅಲೋಚನೆ ಪ್ರತಿವಾರಕ್ಕೊಮ್ಮೆ ಆಹಾರ, ಆರೋಗ್ಯ, ಅಕ್ಷರ, ವ್ಯವಹಾರಿಕ ತುರ್ತು ಪರಿಸ್ಥಿತಿಯಲ್ಲಿ ಪರಸ್ಪರ ತಂಡ ಒಬ್ಬರಿಗೊಬ್ಬರು ಕೈಜೋಡಿಸುವ ಮೂಲಕ ಆಕಸ್ಮಿಕ ತುರ್ತು ಪರಿಸ್ಥಿತಿಯಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವ ನಂಬಿಕೆಯ ತಂಡ ರಚನೆ ಹಾಗೂ ಕಾರ್ಯನಿರ್ವಹಣೆಯ ಯೋಜನೆ.

ಜೀವನ ಎಂದರೆ ಹಾಗೆಯೇ. ಕೆಲವೊಂದು ಬಾರಿ ಅನಿರೀಕ್ಷಿತ ಆಘಾತಗಳು ಬರುತ್ತವೆ. ಅದನ್ನು ಎದುರಿಸಲಿಕ್ಕಾಗಿಯೇ ಪ್ರತಿಯೊಬ್ಬರ ಬಳಿ ನಿಗದಿತ ಮೊತ್ತ ಇರಲೇಬೇಕು. ಕನಿಷ್ಠವೆಂದರೆ ಮೂರು ತಿಂಗಳ ವರೆಗಿನ ಖರ್ಚು ವೆಚ್ಚ ನಿಭಾಯಿಸುವ ಪರಿಸ್ಥಿತಿ ಇರಬೇಕು.

**ಆಪತ್ ಧನ ಜೊತೆಯಲ್ಲಿ ಸಬಲೀಕರಣ:**

ಉದಾಹರಣೆಗೆ ನನ್ನಲ್ಲಿ ಒಂದು ಸಾವಿರ ಹಣ ಇದೆ.. ಅದರಲ್ಲಿ ಕನಿಷ್ಟ ವ್ಯಾಪಾರ ಮಾಡಬಹುದು.. ಆದರೆ.. ಕಿರು ವ್ಯಾಪಾರ ವಹಿವಾಟು ಮಾಡ ಬೇಕಾದರೆ ಕನಿಷ್ಠ ಮೊತ್ತದ ಹಣ ಹೂಡಿಕೆ ಬೇಕಲ್ವಾ, ಹಾಗಾಗಿ... ಉದಾಹರಣೆಗೆ..

ಮೂವತ್ತು ಜನ ಸದಸ್ಯರು ಇದ್ದು ವಾರಕ್ಕೊಮ್ಮೆ ತಲಾ ಸಾವಿರ ಹಣ ಹೂಡಿಕೆ ಮಾಡಿದಲ್ಲಿ. ಮೂವತ್ತು ಸಾವಿರ ಆಗುತ್ತದೆ ಅದನ್ನು ವಾರಕ್ಕೊಮ್ಮೆ ಒಬ್ಬರಿಗೆ ನೀಡಿದಲ್ಲಿ ಸಾಮಾನ್ಯ ವ್ಯಾಪಾರ ವಹಿವಾಟು ನಡೆಸಲು ಸಾಧ್ಯ ಅಲ್ಲವೇ.ನಿಮ್ಮ ಕಷ್ಟಕ್ಕೆ ಯಾರು ಬರೋದಿಲ್ಲ, ಇದೇ ಕಾರಣಕ್ಕೆ ಎಲ್ಲರೂ ಎಮರ್ಜೆನ್ಸಿ ಫಂಡಿಂಗ್ ಮಾಡ್ಬೇಕು!

## ಪರಸ್ಪರ ನಿರಂತರ

# ಪರಸ್ಪರ ಉಳಿತಾಯ ಡಬ್ಬಿ

ಹಣ ಉಳಿತಾಯವು ಆಪತ್ ಕಾಲದಲ್ಲದೆ, ನಾವು ಅಂದುಕೊಂಡಿರುವ ಕನಸಿನ ಮನೆ, ವಾಹನ, ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸ, ಮದುವೆ, ಅನಾರೋಗ್ಯ ಹೀಗೆ ಹಲವಾರು ಕನಸನ್ನು ನನಸು ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಾಗೆಯೇ ನಿವೃತ್ತಿ ನಂತರದ ಜೀವನವನ್ನು ಸಂತೋಷದಿಂದ ನಡೆಸಲು ಉಳಿತಾಯು ಸಹಕಾರಿಯಾಗುತ್ತದೆ.

## ಉಳಿತಾಯ ಪೆಟ್ಟಿಗೆಯ ಉಪಯೋಗಗಳು

ಉಳಿತಾಯ ಡಬ್ಬಿಯು ಹಣಕಾಸಿನ ಜವಾಬ್ದಾರಿಯನ್ನು ಕಲಿಸಲು ಅತ್ಯುತ್ತಮ ಸಾಧನವಾಗಿದೆ, ವಿಶೇಷವಾಗಿ ಮಕ್ಕಳಿಗೆ, ಸಮಯದೊಂದಿಗೆ ಹಣವನ್ನು ಉಳಿಸುವ ಪರಿಕಲ್ಪನೆಯನ್ನು ಪರಿಚಯಿಸುವ ಮೂಲಕ ಉಳಿತಾಯದ ಅಭ್ಯಾಸಗಳನ್ನು ಉತ್ತೇಜಿಸುತ್ತದೆ.

### ಬಜೆಟ್ ನಿರ್ವಹಣೆ.

ರಜಾದಿನಗಳು, ತುರ್ತು ಪರಿಸ್ಥಿತಿಗಳು ಅಥವಾ ವಿಶೇಷ ಖರೀದಿಗಳಂತಹ ನಿರ್ದಿಷ್ಟ ಗುರಿಗಳಿಗಾಗಿ ಸಣ್ಣ ಪ್ರಮಾಣದ ಹಣವನ್ನು ಹೊಂದಿಸಲು ವಯಸ್ಕರು ಉಳಿತಾಯ ಪೆಟ್ಟಿಗೆಗಳನ್ನು ಬಳಸಬಹುದು.

### ಶಿಸ್ತನ್ನು ಉತ್ತೇಜಿಸುತ್ತದೆ:

ಉಳಿತಾಯ ಪೆಟ್ಟಿಗೆಯಲ್ಲಿ ನಿಯಮಿತವಾಗಿ ಹಣವನ್ನು ಠೇವಣಿ ಮಾಡುವುದರಿಂದ ವೈಯಕ್ತಿಕ ಹಣಕಾಸು ನಿರ್ವಹಣೆಯಲ್ಲಿ ಶಿಸ್ತನ್ನು ಬೆಳೆಸಲು ಸಹಾಯ ಮಾಡುತ್ತದೆ.

### ಉಡುಗೊರೆ ನೀಡುವಿಕೆ:

ಉಳಿತಾಯದ ಪ್ರಾಮುಖ್ಯತೆಯನ್ನು ಸಂಕೇತಿಸುವ ಮಕ್ಕಳಿಗೆ ಅಥವಾ ಯುವ ವಯಸ್ಕರಿಗೆ ಉಳಿತಾಯದ ಪೆಟ್ಟಿಗೆಯು ಚಿಂತನಶೀಲ ಉಡುಗೊರೆಯಾಗಿರಬಹುದು. ಮೋಜಿನ ಉಳಿತಾಯ ಸವಾಲುಗಳನ್ನು ಪ್ರೋತ್ಸಾಹಿಸುತ್ತದೆ. ನಿರ್ದಿಷ್ಟ ಪಂಗಡದ ಎಲ್ಲಾ ನಾಣ್ಯಗಳನ್ನು ಸಂಗ್ರಹಿಸುವುದು ಅಥವಾ ಗಡುವಿನೊಳಗೆ ನಿರ್ದಿಷ್ಟ ಮೊತ್ತವನ್ನು ಉಳಿಸುವುದು ಮುಂತಾದ ಉಳಿತಾಯ ಸವಾಲುಗಳಿಗೆ ಜನರು ಇದನ್ನು ಬಳಸಬಹುದು.

### ಸಾಂಸ್ಕೃತಿಕ ಅಥವಾ ಸಾಂಕೇತಿಕ ಉಪಯೋಗಗಳು:

ಕೆಲವು ಸಂಸ್ಕೃತಿಗಳಲ್ಲಿ, ಸಮೃದ್ಧಿ ಮತ್ತು ಆರ್ಥಿಕ ಯೋಗಕ್ಷೇಮವನ್ನು ಉತ್ತೇಜಿಸಲು ಹಬ್ಬಗಳು ಅಥವಾ ಸಮಾರಂಭಗಳಲ್ಲಿ ಉಳಿತಾಯ ಪೆಟ್ಟಿಗೆಗಳನ್ನು ಬಳಸಲಾಗುತ್ತದೆ.

"ಪ್ರತಿದಿನ ಪ್ರಗತಿಯತ್ತ ಪರಸ್ಪರ"

# ಪರಸ್ಪರ ನಿರಂತರ